

ರೂಪುಗೆಟ್ಟ ಸಂಡಿಗೆಗಳಂತಹ ಶಿಲೀಂಧ್ರಗಳು



ಶಿಲೀಂಧ್ರ... ಚೆಲುವೆಲ್ಲ ನಂದೆಂದಿತು



ಕಡಲೆಹಿಟ್ಟಿನ ಬೋಂಡಾಗಳಲ್ಲ; ಶಿಲೀಂಧ್ರಗಳು

ತೋಟಕ್ಕೆ ಕರೆದೊಯ್ಯುವುದು ಸಾಮಾನ್ಯ. ಅಲ್ಲಿ ಕಾಣುವ ಅಚ್ಚರಿಗಳಿಂದ ಪುಳಕಿತರಾಗಿ, ಕೆಲವೊಮ್ಮೆ ಮಕ್ಕಳೇ, 'ಸರ್, ನಮ್ಮನ್ನು ತೋಟಕ್ಕೆ ಕರೆದುಕೊಂಡು ಹೋಗಿ' ಎಂದು ದುಂಬಾಲು ಬೀಳುತ್ತವೆ. ಹೀಗೊಮ್ಮೆ ಮಕ್ಕಳೊಂದಿಗೆ ಹೊರಟಾಗ 'ಸ್ನೋ ಫಂಗಸ್' ಎಂಬ ಕೌತುಕ ಕಣ್ಣಿಗೆ ಬಿತ್ತು. ಅದನ್ನು ಶಿಲೀಂಧ್ರವೆಂದು ಗುರುತಿಸುವುದೇ ಕಷ್ಟ. ಹಿಮಾಲಯ ಪ್ರದೇಶದಲ್ಲಿ ಹಿಮಪಾತವಾದಾಗ ಗಿಡಗಳ ಮೇಲೆ ಹಿಮ ಆವರಿಸಿದ ರೀತಿಯೇ ಈ ಅಣಬೆ ಕಾಣುತ್ತದೆ. ಮತ್ತೊಂದು ಸಲ ಕಣ್ಣಿಗೆ ಬಿದ್ದದ್ದು ಕಡ್ಡಿಯಂತೆ ಕಾಣುವ ಕೆಂಪು ಬಣ್ಣದ ಕೊಳೆತಿನಿ. ಗರಿ ತೆಗೆದ ತೆಂಗಿನ ಕಡ್ಡಿಗೆ ಕೆಂಪು ಬಣ್ಣ ಬಳಿದಂತೆ ಕಾಣುವ ಇದು, ಸುಮಾರು 4 ರಿಂದ 5 ಸೆಂ.ಮೀ. ಉದ್ದ ಬೆಳೆಯುತ್ತದೆ. ಇವುಗಳ ಜೀವಿತಾವಧಿ ತುಸು ದೀರ್ಘವಾಗಿದ್ದು, ಬೀಜಕಗಳನ್ನು ಹೊರಹಾಕಿದ ಮೇಲೂ ಒಣಗಿ ಕಡ್ಡಿಯಂತೆ ಉಳಿದುಬಿಡುತ್ತದೆ.

ಮತ್ತೊಂದು ಬಗೆಯ ಅಣಬೆ ಥೇಟ್ ಇಂಗ್ಲೆಂಡಿನ ರಾಣಿ ಧರಿಸುವ ಟೊಪ್ಪಿಯಂತೆ. ನೋಡಲು ಬಹು ಸುಂದರವಾಗಿ ಕಾಣುವ ಇದರ ಹೆಸರು 'ಫಲ್ಲಸ್ ಇಂಡುಸಿಯೇಟಸ್'. ಸಾಧಾರಣವಾಗಿರುವ ಕಾಂಡಕ್ಕೆ ಸಣ್ಣ ಕೊಡೆ, ಕೊಡೆ ಅರಳದೇ ಇದ್ದರೂ ಅದರ ಅಂಚಿಂದ ಹೆಣೆದಿರುವ ಜಾಲರಿಯ ಬಟ್ಟೆಯಂತೆ ಸುತ್ತಲೂ ಆವರಿಸಿರುವ ರಚನೆ ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಮಧುರ ವಾಸನೆ ಹೊಂದಿಲ್ಲದ ಇದು ನೊಣ, ಕೀಟಗಳನ್ನು ಆಕರ್ಷಿಸುತ್ತದೆ. ಹಳದಿ, ಕಿತ್ತಳೆ ಮತ್ತು ಬಿಳಿ ಬಣ್ಣದ್ದಾಗಿದ್ದು, ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಕೆಲವು ಅಣಬೆಗಳು ಚರ್ಮಕುಷ್ಠ ಬಂದು ಮೈ ಮೇಲೆಲ್ಲಾ ಗಂಟುಗಳಾದಂತೆ ಮುಳ್ಳುಗಳಂಥ ರಚನೆ ಹೊಂದಿರುತ್ತವೆ. ಆಕರ್ಷಕ ಹಳದಿ ಬಣ್ಣ ಇವುಗಳದ್ದು. ಇನ್ನೊಂದು ಬಗೆಯ ಅಣಬೆ, ನೀಳಕಾಯದ ಶ್ವೇತಸುಂದರಿಯಂತೆ ಸಪೂರ ಕಾಂಡ ಹೊಂದಿದ್ದು, ಮಧ್ಯೆ ಬೆರಳಿಗೆ ಬೆಳ್ಳಿಯುಂಗುರ ತೊಡಿಸಿದಂತೆ ಸಣ್ಣ ಸುತ್ತು! ಮೇಲೆ ಮತ್ತು

## ಜೀವಿಗಳ ಸಾಮ್ರಾಜ್ಯ

ಜೀವಿಗಳನ್ನು ವರ್ಗೀಕರಿಸುವ ಕಾರ್ಯ ಕೊರೊಲಸ್ ಲಿನೆಯಸ್ ಅವರಿಂದ ಪ್ರಾರಂಭವಾದಾಗ ಕೇವಲ ಎರಡು ಸಾಮ್ರಾಜ್ಯಗಳು ಮಾತ್ರವೇ ಇದ್ದವು. ತದನಂತರ ಮತ್ತಷ್ಟು ಬಗೆಯ ಜೀವಿಗಳು ಪತ್ತೆಯಾಗಿ, ಅವುಗಳ ನಡುವೆ ಭಿನ್ನತೆ ಇದ್ದುದರಿಂದಾಗಿ ಹೊಸ ಸಾಮ್ರಾಜ್ಯಗಳನ್ನು ಸೃಷ್ಟಿಸುವ ಅನಿವಾರ್ಯ ಉಂಟಾಯಿತು. ಅದರ ಪರಿಣಾಮವಾಗಿಯೇ 'ಮೊನೇರ', 'ಪ್ರೊಟಿಸ್ಟ' ಮತ್ತು 'ಮೈಕೋಟ' ಸಾಮ್ರಾಜ್ಯಗಳು ಉಗಮವಾದವು.

ಮೈಕೋಟ ಸಾಮ್ರಾಜ್ಯದ ಜೀವಿಗಳ ವೈಶಿಷ್ಟ್ಯ ಇತರ ಜೀವಿಗಳಂತೆ ಇಲ್ಲದಿರುವುದೇ ಆಗಿದೆ. ಅವುಗಳ ಆಹಾರ ಕ್ರಮ, ಜೀವಿತಾವಧಿ, ಗಾತ್ರ ಹಾಗೂ ಬಣ್ಣ ಸಂಪೂರ್ಣ ಭಿನ್ನ.

ಸಸ್ಯಗಳು ತಮ್ಮ ಆಹಾರವನ್ನು ತಾವೇ ತಯಾರಿಸಿಕೊಂಡು ಸ್ವಪೋಷಕಗಳು ಎನಿಸಿಕೊಂಡರೆ, ಪ್ರಾಣಿಗಳು ಸಸ್ಯಗಳನ್ನೋ ಅಥವಾ ಇತರ ಪ್ರಾಣಿಗಳನ್ನು ತಿಂದು ಪರಪೋಷಕಗಳು ಎಂಬ ಹಣೆಪಟ್ಟಿ ಅಂಟಿಸಿಕೊಂಡಿವೆ! ಮೇಲಿನವೆರಡೂ ಆಹಾರವನ್ನು ಪಡೆದು ದೇಹದೊಳಗೆ ಜೀರ್ಣಿಸಿಕೊಂಡು ಅದರಲ್ಲಿರುವ ಪೋಷಕಗಳನ್ನು ಬಳಸಿಕೊಳ್ಳುತ್ತವೆ. ಆದರೆ ಶಿಲೀಂಧ್ರಗಳು ಇವೆರಡರಂತೆ ಅಲ್ಲದೇ, ಆಹಾರ ಪಡೆದುಯುವುದು ಸತ್ತ ಅಥವಾ ಸಾವಯವ ಜೀವಿಗಳಿಂದ. ಹಾಗಾಗಿ ಇವುಗಳು ಕೊಳೆತಿನಿಗಳು (ಸ್ಯಾಪ್ರೊಫೈಟ್‌ಗಳು) ಎಂಬ ಹೆಸರು ಪಡೆದುಕೊಂಡಿವೆ. ಈ ಜೀವಿಗಳು ಆಹಾರವನ್ನು ಜೀರ್ಣಿಸಿಕೊಳ್ಳುವುದು ದೇಹದ ಹೊರಗೆ!